ಬೇರೆ ಜಿಲ್ಲೆಗಳಿಗೆ 50—60 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿರುವಾಗ ನಮ್ಮ ಜಿಲ್ಲೆಗೆ ಸಮಾನ ಅವಕಾಶ ಕೊಡುವುದು ಸರ್ಕಾರದ ಕರ್ತವ್ಯ ವಲ್ಲವೆ? ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಮಾರು 7 ತಾಲ್ಲೂಕುಗಳಿವೆ. ಆ ತಾಲ್ಲೂಕುಗಳಲ್ಲಿ ಕಡೂರಿನಲ್ಲಿ ಮಾತ್ರ ನಿಮ್ನವರ್ಗದ ಹಾಸ್ಟಲುಗಳಿವೆ. ಬಾಕಿ ಉಳಿದ ತಾಲ್ಲೂಕುಗಳಲ್ಲಿ ಒಂದು ವಿದ್ಯಾರ್ಥಿನಿಲಯವು ಸಹ ಇಲ್ಲ. ಕೇವಲ ಮೂಡಿಗೆರೆ ತಾಲ್ಲೂಕು ಬಹಳ ಹಿಂದುಳಿದ ಪ್ರಾಂತ.

Mr. SPEAKER.—The cut motion is for starting a Girls' High School but you want to speak on all your cut motions in a way. You kindly confine your remarks to the cut motion you have now moved.

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ಈಗ ನಾನು ಹೇಳಿದ್ದಾಗಿದೆ, ಯತ್ನವಿಲ್ಲ. ಬಾಲಕೆಯರ ಹೈಸ್ಕೂಲು ಸ್ಥಾಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಮತ್ತು ಬಾಕಿ ಏನು ಅನಾನುಕೂಲವಿದೆಯೋ ಅದನ್ನು ನಿವಾರಿಸಿ ಆ ಜಿಲ್ಲೆಯಲ್ಲಿ ಆಗಬೇಕಾದ ಅನುಕೂಲತೆಗಳೆಲ್ಲವನ್ನೂ ಸರ್ಕಾರದವರು ಒದಗಿಸುತ್ತಾರೆಂಬ ಭರವಸೆಯ ಮೇಲೆ ನಾನು ಈ ನಿರ್ಣಯವನ್ನು ಮುಂಡಿಸುತ್ತೇನೆ.

Mr. SPEAKER.—Cut motion moved.

"That the demand be reduced by Rs. 100."

*ಶ್ರೀ ಎ. ಜಿ. ರಾಮಚಂದ್ರರಾವ್.—ಈ ಖೋತಾ ನಿರ್ಣಯದ ಮುಖ್ಯೋದ್ದೇಶ ಚಿಕ್ಕಮಗಳೂರಿನಲ್ಲಿ ಹೆಣ್ಣುಮಕ್ಕಳಿಗಾಗಿ ಹೈಸ್ಕೂಲನ್ನು ಪ್ರಾರಂಭಿಸುವುದು. ಆದರೆ ಚರ್ಚೆಯಲ್ಲಿ ಕಾಲೇಜು ವಿಚಾರ ಸಹ ಪ್ರಸ್ತಾಪಿಸಲ್ಪಟ್ಟಿದೆ. ಅದಕ್ಕಾಗಿ ಅಲ್ಲಿ ಈಗೊಂದು ಬಿಲ್ಡಿಂಗ್ ಸಿದ್ಧವಾಗಿದೆ. ಅದನ್ನು ಇನ್ನೂ ಉತ್ತಮ ಪಡಿಸುವುದಕ್ಕೂ ಅವಕಾಶವಿದೆ. ಆದುದರಿಂದ ಇದನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ಇನ್ನು ಹೈಸ್ಕೂಲು ವಿಚಾರ. ಅಲ್ಲಿ ಸೆಂಟ್ ಜೋಸೆಫ್ ಕಾನ್ವೆಂಟ್ ಗರ್ಲ್ಸ್ ಹೈಸ್ಕೂಲಿದೆ. ಅಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ತಕ್ಕ ಸೌಕರ್ಯಗಳಿವೆ. ಎಲ್ಲಿ ಅವಶ್ಯಕತೆ ಹೆಚ್ಚಾಗಿದೆಯೋ ಅಲ್ಲಿ ಇದಕ್ಕೆ ಅವಕಾಶ ಕಲ್ಪಿಸಬೇಕೆಂಬುದು ಸರ್ಕಾರದ ಉದ್ದೇಶ. ಆದುದರಿಂದ ಮಾನ್ಯ ಸೂಚಕರು ತಮ್ಮ ಖೋತಾ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ.—ನನ್ನ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The cut motion was, by leave, withdrawn.

Educational Facilities to Backward people of Malnad.

ಶ್ರೀಮತಿ ಬಿ. ಎಲ್. ನುಬ್ಬಮ್ಮ (ಚಿಕ್ಕಮಗಳೂರು—ಮೂಡಿಗೆರೆ).—ಸ್ವಾಮಿ, ನನ್ನ ಖೋತಾ ಸೂಚನೆ ಈರೀತಿ ಇದೆ:

"That the demand under the head '37. Education' for Rs. 3,77,90,000 be reduced by Rs. 100 (to raise a debate on the need for giving more educational facilities to people who are backward in Malnad parts)."

ಅಧ್ಯಕ್ಷರೇ, ಮಲೆನಾಡು ಪ್ರದೇಶದಲ್ಲಿರುವ ಹಿಂದುಳಿದ ಕೋಮಿನವರ ಹಿತದೃಷ್ಟಿಯಿಂದ ನಾನು ಈ ಖೋತಾ ಸೂಚನೆಯನ್ನು ನಭೆಯ ಮುಂದಿಡುತ್ತೇನೆ. ಹಿಂದುಳಿದ ಪಂಗಡದವರಲ್ಲಿ ಬೆಸ್ತರು, ಬೇಡರು, ಕುಂಬಾರರು, ಕೊರಮರು, ಬಲ್ಲವರು, ಕೊರಚರು ಮುಂತಾದ ನಾನಾ ಜಾತಿಯವರು ಇರುತ್ತಾರೆ. ಇವರಿಗೆಲ್ಲಾ ಬೋರ್ಡಿಂಗ್ ಹೋಂಗಳಿಲ್ಲದೆ, ಹಿಂದುಳಿದಿದ್ದಾರೆ. ಈ ಜನಾಂಗದ ಪರವಾಗಿ ಪ್ರತಿನಿಧಿಗಳು ಯಾರೂ ಇಲ್ಲದಿರುವುದರಿಂದ ಇವರ ಕಷ್ಟನಷ್ಟಗಳನ್ನು ಸರ್ಕಾರದ ಮುಂದೆ ತರುವುದು ಕಷ್ಟವಾಗಿದೆ. ಇವರಿಗೆಲ್ಲಾ ಬೋರ್ಡಿಂಗ್ ಹೋಂಗಳನ್ನು ಒದಗಿಸಿ ಕೊಟ್ಟು ವಿದ್ಯಾರ್ಹತೆಯಲ್ಲಿ ಈ ಜನಾಂಗದವರು ಮುಂದುವರಿಯಲು ಸಮಸ್ತ ಸೌಲಭ್ಯಗಳನ್ನೂ ಒದಗಿಸಿ ಮತ್ತು ಹೆಚ್ಚಿಗೆ Scholarshipsಗಳನ್ನು ಸಹ ಕೊಡಬೇಕಾದುದು ಅತ್ಯಗತ್ಯವಾಗಿದೆ. ಹಿಂದುಳಿದ ಜನಾಂಗವು ಮುಂದೆ ಬಂದಷ್ಟೂ ನಮ್ಮ ದೇಶದ ಪ್ರಗತಿ ಹೆಚ್ಚುತ್ತದೆಂಬ ಧ್ಯೇಯವನ್ನು ಸರ್ಕಾರದವರು ಇಟ್ಟುಕೊಂಡು ಇವರಿಗೆ ಆದಷ್ಟು ಸಹಾಯವನ್ನು ಒದಗಿಸಿ ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತಾ ಈ ಖೋತಾ ಸೂಚನೆಯನ್ನು ನಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

*ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಾಮಿ, ಮಲೆನಾಡು ಪ್ರದೇಶ ಹಿಂದುಳಿದಿದೆ, ಜನರು ಸಹ ಹಿಂದುಳಿದಿರತಕ್ಕವರು ಎಂದು ವಿದಿತವಾಗಿದೆ. ಇದನ್ನು ಅರಿತೇ ಸರ್ಕಾರದವರು ಅವರ ವಿಚಾರದಲ್ಲಿ ಉದಾರ ನೀತಿಯನ್ನು ಅನುಸರಿಸುತ್ತಿದ್ದಾರೆ. ಪ್ರಾಥಮಿಕ ವಿದ್ಯಾಭ್ಯಾಸ ಶಾಲೆಯನ್ನು ಪ್ರಾರಂಭಿಸಲು ಒಂದು ಗ್ರಾಮದಲ್ಲಿ 300 ಪ್ರಜಾಸಂಖ್ಯೆಯಾದರೂ ಇರಬೇಕೆಂಬುದನ್ನು ಸಡಿಲಮಾಡಿ ಮಲೆನಾಡು ಪ್ರದೇಶದಲ್ಲಿ 200 ಪ್ರಜಾಸಂಖ್ಯೆಯಿದ್ದರೆ ಸಾಕು ಎಂದು ನಿಗದಿ ಮಾಡಿದೆ. ಸ್ಕಾಲರ್‌ಷಿಪ್ ಕೊಡುವಾಗ ಸಹ ಮಲೆನಾಡು ಪ್ರದೇಶಕ್ಕೆ ಬಾಕಿ ಕಡೆಗಿಂತ ಹೆಚ್ಚಿನ ರಿಯಾಯಿತಿ ತೋರಿಸಿದೆ. ಮಲೆನಾಡು ಹೈಸ್ಕೂಲಿಗೆ 50 ಮತ್ತು ಮಿಡ್ಲ್ ಸ್ಕೂಲಿಗೆ 50 ಜಾಸ್ತಿ ಮಾಡಿರುತ್ತಾರೆ.

ಶ್ರೀಮತಿ ಬಿ. ಎಲ್. ನುಬ್ಬಮ್ಮ.—Backward Scholarship ನಾಲ್ಕು ಕೊಟ್ಟಿರುತ್ತಾರೆ. ಇದರಿಂದ ಹಿಂದುಳಿದ ಪಂಗಡಕ್ಕೆ ಹೆಚ್ಚಿನ ಸ್ಕಾಲರ್‌ಷಿಪ್ ದೊರಕಲು ಅನಾನುಕೂಲವೆಂಬುದು ನನ್ನ ಮೂಲ ಉದ್ದೇಶ.

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ತಾನೇ ತಿಳಿಸಿದಹಾಗೆ ಮಲೆನಾಡು ಪ್ರದೇಶದ ವಿಚಾರದಲ್ಲಿ ಹೆಚ್ಚಿನ ರಿಯಾಯಿತಿ ತೋರಿಸುವ ನೀತಿಯನ್ನು ಸರ್ಕಾರ ಅನುಸರಿಸುತ್ತಿದೆ. ಆದಕಾರಣ ಶ್ರೀಮತಿ ಬಿ. ಎಲ್. ನುಬ್ಬಮ್ಮನವರು ತಮ್ಮ ಖೋತಾ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ನನ್ನ ಖೋತಾ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The cut motion was, by leave, withdrawn.

Payment of Government Quota to Municipal High Schools.

4 P.M.

Sri B. MADHAVACHAR (Bhadravati).—I beg to move:

"That the demand under the head '37. Education' for Rs. 3,77,90,000 be reduced by Rs. 100 (to expedite payment of Government quotas to Municipal High Schools to enable the teachers to get their pay regularly)."

ಸ್ವಾಮಿ, ಈ ಖೋತಾ ನಿರ್ಣಯವನ್ನು ಮಂಡಿಸುವ ಉದ್ದೇಶ ಇಷ್ಟು: ಅನೇಕ ಪೌರಸಭೆಗಳಿಗೆ ಸೇರಿದ ಮುನಿಸಿಪಲ್ ಹೈಸ್ಕೂಲುಗಳಲ್ಲಿ ಉಪಾಧ್ಯಾಯರಿಗೆ ಸಕಾಲಕ್ಕೆ ಸಂಬಳ ಪಾವತಿ ಆಗುತ್ತಿಲ್ಲ. ನಾನು ಈ ವಿಚಾರವನ್ನು ಅಕಸ್ಮಾತ್ ವಿಚಾರಿಸಿದ್ದರಲ್ಲಿ ಪೌರಸಭೆ-ಜಿಲ್ಲಾ ಬೋರ್ಡ್‌ಗಳ ಆರ್ಥಿಕ ಸ್ಥಿತಿ ಬಹಳ ಹದಗೆಟ್ಟು ಹೋಗಿರುವುದರ ಜೊತೆಗೆ ಸರ್ಕಾರದಿಂದ ಬರುವ ಗ್ರಾಂಟು ಸಹ ನಿಧಾನವಾಗುತ್ತಿದೆ, ಸಕಾಲಕ್ಕೆ ಬರುತ್ತಿಲ್ಲವೆಂದು ತಿಳಿಯಬಂತು. ಈ ವಿಚಾರದಲ್ಲಿ ಸರ್ಕಾರದಿಂದ ತಡವಾಗಿದ್ದರೆ ಈ ರೀತಿಯ ದೋಷಾರೋಪಣೆಗೆ ಎಡೆಗೊಡದೆ ಆದಷ್ಟು ಬೇಗ ಇದನ್ನು ಸರಿಪಡಿಸಿ ಸಕಾಲದಲ್ಲಿ ಈ ಗ್ರಾಂಟು ಪೌರಸಭೆಗೆ ತಲಪುವ ವ್ಯವಸ್ಥೆಮಾಡಬೇಕೆಂದು ಕೋರಿ ಈ ಖೋತಾ ಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

*ಶ್ರೀ ಎ. ಜಿ. ರಾಮಚಂದ್ರರಾವ್.—ಯಾವುದಾದರೂ ಮುನಿಸಿಪಲ್ ಸ್ಕೂಲಿನ ಆಡಳಿತ ವ್ಯವಸ್ಥೆಯಲ್ಲಿ ಲೋಪ ಕಂಡುಬಂದಿದ್ದರೆ ಅಂಥ ಸಂದರ್ಭಗಳಲ್ಲಿ ಮಾತ್ರ ಗ್ರಾಂಟು ಕೊಡುವ ವಿಚಾರದಲ್ಲಿ ನ್ಯಾಯ್ಯ ನಿಧಾನವಾಗಿದೆಯೇ ಹೊರತು ಮತ್ತೆ ಬೇರೆ ಇಲ್ಲ. ಮುನಿಸಿಪಲ್ ಹೈಸ್ಕೂಲಿನಲ್ಲಿ ಹೊಸದಾಗಿ ಉಪಾಧ್ಯಾಯರನ್ನು ಸೇರಿಸುವಾಗ ಅದನ್ನು ಸರ್ಕಾರಕ್ಕೆ ತಿಳಿಸಿ, ಮಂಜೂರಾತಿ ಪಡೆದು ಸೇರಿಸಿದರೆ ತೊಂದರೆ ಇಲ್ಲ. ಹಾಗಿಲ್ಲದೆ ಈ ವಿಚಾರದಲ್ಲಿ ಅವರು ಮನಸ್ಸು ಬಂದ ಹಾಗೆ ವರ್ತಿಸಿ ಕೊನೆಗೆ ವರ್ಷದ ಅವಧಿಯಲ್ಲಿ ಸಿಬ್ಬಂದಿ ಜಾಸ್ತಿ ಎಂದು ಹೇಳಿದರೆ, ಅದಕ್ಕೆ ಸಂಬಂಧಪಟ್ಟ ಖರ್ಚನ್ನು ವಹಿಸುವುದಕ್ಕೆ ಆ ಮುನಿಸಿಪಲ್ ಹೈಸ್ಕೂಲಿಗೆ ಶಕ್ತಿಯಿದೆಯೇ ಎಂಬುದನ್ನು ಪರಿಶೀಲನೆ ಮಾಡಲು ತಡವಾಗುತ್ತದೆ. ಆದುದರಿಂದ ಯಾವ ಮುನಿಸಿಪಲ್ ಹೈಸ್ಕೂಲಿನ ವಿಚಾರದಲ್ಲಿಯೇ ಆಗಲಿ, ಸಿಬ್ಬಂದಿ ಜಾಸ್ತಿಮಾಡುವ ವಿಚಾರವನ್ನ ಮೊದಲು ಸರ್ಕಾರಕ್ಕೆ ತಿಳಿಸಿ ಮಂಜೂರಾತಿ ಪಡೆದಿದ್ದರೆ ಅಂಥ ಸಂದರ್ಭಗಳಲ್ಲಿ ನಿಧಾನವಾಗುತ್ತಿಲ್ಲ. ಇಷ್ಟು ವಿವರಣೆಯಿತ್ತ ಮೇಲೆ ಮಾನ್ಯ ಸೂಚಕರು ತಮ್ಮ ಖೋತಾ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ಬಿ. ಮಾಧವಾಚಾರ್.—ನನ್ನ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The cut motion was, by leave, withdrawn.

Posting Primary School teacher to Kadiranpalya in Ulsoor.

***Sri M. PALANIYAPPAN** (Ulsoor).—Sir, I beg to move:

"That the demand under the head '37. Education' for Rs. 3,77,90,000 be reduced by Rs. 100 (to raise a debate on the need of posting a primary school teacher to Kadiranpalya in Ulsoor Constituency)."

Though the cut motion looks so simple, I have to say that this is the third time I am moving it on the floor of this House and still it has not received the attention that is due. I do not know whether any cut motion which is moved in this House, comes to the notice of the Government. Other cut motions that are included in the list but are not moved will come to the notice of the Government. So I understand. Last time I had no occasion to move my cut motion though printed in the list and I think the Government have not noticed it. I have written a letter to the Director of Public Instruction in the matter and till today I have not received any reply from him. The village people have constructed a building at their cost and they have written to the Government asking for a teacher to be posted and in spite of that, I have not received any reply from the authorities concerned. Also the other day the Hon'ble the Revenue Minister went to the place for a function and the villagers showed the building also. He was pleased to see the building and he immediately promised to grant a teacher. He intimated to the Director of Public Instruction. But till today no teacher has been posted. Similar